**All India Radio: Bangalore**
**Regional Bulletin In Kannada**
**14.05.2025 / 1.10 p.m.**

**ಆಕಾಶವಾಣಿ ಬೆಂಗಳೂರು**

**ಪ್ರದೇಶ ಸಮಾಚಾರ**

**14.05.2025 / 1.10 p.m.**

**ಮುಖ್ಯಾಂಶಗಳು**

1. ಆಪರೇಷನ್ 'ಸಿಂದೂರ್' ಕಾರ್ಯಾಚರಣೆ ಯಶಸ್ಸಿಗೆ ಸಶಸ್ತ್ರ ಪಡೆಗಳನ್ನು ಅಭಿನಂದಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು
2. ಪ್ರಧಾನಿ ಅಧ್ಯಕ್ಷತೆಯಲ್ಲಿ ಭದ್ರತೆ ಕುರಿತ ಮಹತ್ವದ ಕೇಂದ್ರ ಸಂಪುಟ ಸಮಿತಿ ಹಾಗೂ ಸಂಪುಟ ಸಭೆ
3. ಪಾಕಿಸ್ತಾನ ವಶದಲ್ಲಿದ್ದ ಬಿಎಸ್‌ಎಫ್ ಯೋಧ ಪೂರ್ಣ ಕುಮಾರ್ ಶಾ ಭಾರತಕ್ಕೆ ಹಸ್ತಾಂತರ
4. ಭಾರತದ ೫೨ ನೇ ಮುಖ್ಯ ನ್ಯಾಯಮೂರ್ತಿಯಾಗಿ ಭೂಷಣ್ ರಾಮಕೃಷ್ಣ ಗವಾಯಿ ಪದಗ್ರಹಣ
5. ಬಿಹಾರದಲ್ಲಿ ನಡೆಯುತ್ತಿರುವ ಖೇಲೋ ಇಂಡಿಯಾ ಯುವ ಕ್ರೀಡಾಕೂಟಕ್ಕೆ ನಾಳೆ ತೆರೆ; ಪದಕ ಪಟ್ಟಿಯಲ್ಲಿ ಮಹಾರಾಷ್ಟ್ರಕ್ಕೆ ಅಗ್ರ ಸ್ಥಾನ

*******

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತ್ಯುತ್ತರವಾಗಿ ನಡೆದ ಆಪರೇಷನ್ ಸಿಂದೂರ್ ಕಾರ್ಯಾಚರಣೆ ಯಶಸ್ಸಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸೇನಾಪಡೆಯ ಶೌರ್ಯ, ಸಾಹಸ, ಸಮರ್ಪಣಾ ಭಾವದ ಕಾರ್ಯ ನಿರ್ವಹಣೆಯನ್ನು ಶ್ಲಾಘಿಸಿದ್ದಾರೆ. ದೆಹಲಿಯ ರಾಷ್ಟ್ರಪತಿ ಭವನದಲ್ಲಿ ತಮ್ಮನ್ನು ಭೇಟಿಯಾದ ಸಶಸ್ತ್ರ ಪಡೆಗಳ ಮುಖ್ಯಸ್ಥರಿಂದ ಕಾರ್ಯಾಚರಣೆ ಕುರಿತು ಮಾಹಿತಿ ಪಡೆದರು. ರಕ್ಷಣಾ ಪಡೆಯ ಮುಖ್ಯಸ್ಥ ಅನಿಲ್ ಚೌಹಾಣ್, ಸೇನಾಪಡೆ ವರಿಷ್ಠ ಉಪೇಂದ್ರ ದ್ವಿವೇದಿ, ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್.ಕೆ. ತ್ರಿಪಾಠಿ, ಏರ್‌ಚೀಫ್ ಮಾರ್ಷಲ್ ಎ.ಪಿ.ಸಿಂಗ್ ಅವರು ರಾಷ್ಟ್ರಪತಿಯವರನ್ನು ಭೇಟಿಯಾಗಿದ್ದರು.

*******

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿಂದು ಕೇಂದ್ರ ಸಚಿವ ಸಂಪುಟ ಸಭೆ ನಡೆಯುತ್ತಿದೆ. ದೆಹಲಿಯ ಪ್ರಧಾನಿ ನಿವಾಸದಲ್ಲಿ ಸಭೆ ಆರಂಭಗೊಂಡಿದೆ. ಕದನ ವಿರಾಮದ ನಂತರ ನಡೆಯುತ್ತಿರುವ ಮೊದಲ ಸಚಿವ ಸಂಪುಟ ಸಭೆ ಇದಾಗಿದೆ. ಈ ಸಭೆಯಲ್ಲಿ ಇತ್ತೀಚೆಗೆ ಯಶಸ್ವಿಯಾದ ಆಪರೇಷನ್ 'ಸಿಂದೂರ' ಕಾರ್ಯಾಚರಣೆ ಬಗ್ಗೆ ಪ್ರಗತಿ ಪರಿಶೀಲನೆ ನಡೆಯುತ್ತಿದೆ. ಮೇ ೧೦ ರಂದು ಕದನ ವಿರಾಮ ಘೋಷಣೆಯಾದ ನಂತರದ ಬೆಳವಣಿಗೆಗಳ ಪರಾಮರ್ಶಿಸಲಿದೆ. ಭಾರತೀಯ ವಾಯುಪಡೆಯು ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಭಾರತ ತಕ್ಕ ಪ್ರತ್ಯುತ್ತರ ನೀಡಿದ್ದು, ಪಾಕಿಸ್ತಾನದ ಹನ್ನೊಂದು ವಾಯು ನೆಲೆಗಳನ್ನು ಧ್ವಂಸಗೊಳಿಸಿದೆ. ಕದನ ವಿರಾಮದ ನಂತರ ಕೈಗೊಳ್ಳಬೇಕಿರುವ ಕ್ರಮಗಳ ಬಗ್ಗೆ ಸೂಕ್ತ ನೀಲನಕ್ಷೆ ರೂಪಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಗುತ್ತಿದೆ ಎಂದು ತಿಳಿದು ಬಂದಿದೆ.

*******

ಭಾರತ ಗಡಿ ರಕ್ಷಣಾ ಪಡೆಯ ಯೋಧ ಪೂರ್ಣ ಕುಮಾರ್ ಶಾ ಅವರನ್ನು ಪಾಕಿಸ್ತಾನ ಅಟ್ಟಾರಿ-ವಾಘ ಗಡಿಯಲ್ಲಿ ಭಾರತದ ಗಡಿ ರಕ್ಷಣಾ ಪಡೆಗೆ ಮರಳಿಸಿದೆ. ಕಳೆದ ಏಪ್ರಿಲ್ ೨೩ ರಂದು ಫಿರೋಜ್‌ಪುರ್ ಸೆಕ್ಟರ್‌ನಲ್ಲಿ ಕರ್ತವ್ಯದಲ್ಲಿದ್ದಾಗ ಆಕಸ್ಮಿಕವಾಗಿ ಅವರು ಪಾಕಿಸ್ತಾನ ಗಡಿಯನ್ನು ಪ್ರವೇಸಿದ್ದರು. ಗಡಿ ರಕ್ಷಣಾ ಪಡೆ ಧ್ವಜಸಭೆಯಲ್ಲಿ ಸತತ ಪ್ರಯತ್ನದ ನಡೆಸಿದ ಫಲವಾಗಿ ಯೋಧನ ಬಿಡುಗಡೆಯಾಗಿದೆ.

*******

ಭಾರತದ ರಕ್ಷಣಾ ಸಾಮರ್ಥ್ಯದಲ್ಲಿ 'ಆಕಾಶ್‌ತೀರ್' ವಾಯು ರಕ್ಷಣಾ ವ್ಯವಸ್ಥೆ ಪ್ರಮುಖ ಆಧಾರ ಸ್ತಂಭವಾಗಿ ಹೊರಹೊಮ್ಮಿದೆ. ಪಾಕಿಸ್ತಾನದ ಡ್ರೋನ್‌ಗಳು, ಮಿಸ್ಸೈಲ್‌ಗಳು, ಸೂಕ್ಷ್ಮ ಯುಎವಿ ಗಳು ಒಳಗೊಂಡಂತೆ ಹಲವು ಸ್ವರೂಪದ ಅಸ್ತ್ರಗಳನ್ನು ಆಗಸದಲ್ಲೇ ಪರಿಣಾಮಕಾರಿಯಾಗಿ ನಿಯಂತ್ರಿಸುವ ಸಾಟಿಯಿಲ್ಲದ ಸಾಮರ್ಥ್ಯ ಹೊಂದಿದೆ. ಆಕಾಶ್ ತೀರ್ ಕೃತಕಬುದ್ಧಿಮತ್ತೆ ತಂತ್ರಜ್ಞಾನ ಹೊಂದಿದ್ದು, ಸ್ವಯಂ ಚಾಲಿತವಾಗಿ ಕಾರ್ಯ ನಿರ್ವಹಿಸಲಿದೆ. ಸೂಕ್ತ ಕಾಲದಲ್ಲಿ ಗುರಿ ತಲುಪಲು ಬಳಸಬಹುದಾದ ಸಮರ್ಥ ಅಸ್ತ್ರವಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

*******

ಪ್ರಧಾನಿ ನರೇಂದ್ರ ಮೋದಿ ಅವರು ನಿನ್ನೆ ಕ್ಷಯರೋಗ ನಿರ್ಮೂಲನೆ ಕುರಿತು ಉನ್ನತಮಟ್ಟದ ಸಭೆ ನಡೆಸಿದರು. ಕಳೆದ ವರ್ಷ ಟಿಬಿ ಪತ್ತೆ ಮತ್ತು ಚಿಕಿತ್ಸೆ ನೀಡುವಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ. ಸರ್ಕಾರದ ಯಶಸ್ವಿ ಕಾರ್ಯತಂತ್ರಗಳು ಕ್ಷಯ ರೋಗ ಮುಕ್ತ ಭಾರತ ನಿರ್ಮಾಣ ಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಪ್ರಧಾನಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ಇತ್ತೀಚೆಗೆ ಮುಕ್ತಾಯವಾದ ನೂರು ದಿನಗಳ ಟಿಬಿ ಮುಕ್ತ ಭಾರತ ಅಭಿಯಾನ ಕುರಿತಂತೆಯೂ ಪರಿಶೀಲನೆ ಮಾಡಿದರು. ಅಭಿಯಾನದ ವೇಳೆ ೧೨ ಕೋಟಿ ೯೭ ಲಕ್ಷ ಮಂದಿಗೆ ಟಿಬಿ ಪತ್ತೆ ಪರೀಕ್ಷೆ ಮಾಡಲಾಗಿದ್ದು, ಈ ಪೈಕಿ ೭ ಲಕ್ಷದ ೧೯ ಸಾವಿರ ಜನರಿಗೆ ಟಿಬಿ ಇರುವುದು ಪತ್ತೆಯಾಗಿದೆ. ಒಂದು ಲಕ್ಷ ಜನ 'ಕ್ಷಯ ಮಿತ್ರ' ಅಭಿಯಾನದಲ್ಲಿ ಕೈಜೋಡಿಸಿದ್ದಾರೆ. ಸಭೆಯಲ್ಲಿ ಮಾತನಾಡಿದ ಪ್ರಧಾನಿ, ಕ್ಷಯರೋಗವನ್ನು ತ್ವರಿತವಾಗಿ ಪತ್ತೆ ಮಾಡಿದರೆ, ಸಮಸ್ಯೆ ನಿವಾರಣೆಗೆ ಸಹಕಾರಿಯಾಗಲಿದೆ. ಆದ ಕಾರಣ ನಿರ್ಮಾಣ, ಗಣಿ, ಜವಳಿ ಹಾಗೂ ಇದೇ ರೀತಿಯ ವಿವಿಧ ಕೆಲಸ ಮಾಡುವ ಸ್ಥಳಗಳಲ್ಲಿ ಟಿಬಿ ಪತ್ತೆ ಪರೀಕ್ಷೆ ನಡೆಸುವಂತೆ ಅವರು ಸೂಚಿಸಿದರು. ೨೦೨೪ರ ವಿಶ್ವ ಆರೋಗ್ಯ ಸಂಸ್ಥೆಯ ಕ್ಷಯರೋಗ ವರದಿ ಪ್ರಕಾರ ಶೇಕಡ ೧೮ ರಷ್ಟು ಕ್ಷಯ ರೋಗ ನಿರ್ಮೂಲನೆಯಾಗಿದೆ. ಟಿಬಿಯಿಂದ ಮೃತರಾಗುವವರ ಸಂಖ್ಯೆ ಶೇಕಡ ೨೧ ರಷ್ಟು ತಗ್ಗಿದೆ ಎಂದು ತಿಳಿಸಿದೆ.

*******

ಬೆಂಗಳೂರು ಹಾಗೂ ನೋಯಿಡಾದಲ್ಲಿ ಅತ್ಯಾಧುನಿಕ ಭಾರತದ ಪ್ರಥಮ ಮೂರು ಎನ್‌ಎಮ್-ಚಿಪ್ ವಿನ್ಯಾಸ ಕೇಂದ್ರಗಳನ್ನು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಉದ್ಘಾಟಿಸಿದರು. ಭಾರತದಲ್ಲಿ ಮೊದಲ ಬಾರಿಗೆ ಮೂರು ನ್ಯಾನೋ ಮೀಟರ್ ಆಧುನಿಕ ಚಿಪ್ ವಿನ್ಯಾಸಗೊಳಿಸುವ ಈ ಕೇಂದ್ರಗಳು ಜಾಗತಿಕ ಸೆಮಿ ಕಂಡಕ್ಟರ್ ನಾವಿನ್ಯ ವಲಯದಲ್ಲಿ ಭಾರತ ಮೈಲಿಗಲ್ಲು ಸ್ಥಾಪಿಸುವ ಮೂಲಕ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲಿದೆ ಎಂದರು. ಉತ್ತರಪ್ರದೇಶದಲ್ಲೂ ಸೆಮಿಕಂಡಕ್ಟರ್ ವಿನ್ಯಾಸ ಕೇಂದ್ರವನ್ನು ಆರಂಭಿಸಲಾಗುವುದು. ಇದು ದೇಶದ ಪ್ರತಿಭೆಗಳಿಗೆ ಪ್ಯಾನ್ ಇಂಡಿಯಾ ಪರಿಸರ ವ್ಯವಸ್ಥೆಯಲ್ಲಿ ಉಜ್ವಲ ಅವಕಾಶ ಒದಗಿಸಲಿದೆ. ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿ ಮೂಲಕ ಸಮಗ್ರ ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆಯನ್ನು ದೇಶದಲ್ಲಿ ಸ್ಥಾಪಿಸಲಾಗುತ್ತಿದೆ ಎಂದು ಹೇಳಿದರು. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಂಕೀರ್ಣದಾಯಕ ಅಧ್ಯಯನ ಕೌಶಲ್ಯವನ್ನು ಅಭಿವೃದ್ಧಿಪಡಿಸಲು ಸೆಮಿಕಂಡಕ್ಟರ್ ಕಲಿಕಾ ಕಿಟ್ ಒದಗಿಸಲಾಗುವುದು. ೨೭೦ ಕ್ಕೂ ಅಧಿಕ ಶಿಕ್ಷಣ ಸಂಸ್ಥೆಗಳು ಈಗಾಗಲೇ ವಿದ್ಯುನ್ಮಾನ ವಿನ್ಯಾಸ ಸ್ವಯಂ ಚಾಲಿತ ತಂತ್ರಾಂಶ ಸಾಧನಗಳನ್ನು ಪಡೆದುಕೊಂಡಿವೆ ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

*******

ಜಸ್ಟೀಸ್ ಭೂಷಣ್ ರಾಮಕೃಷ್ಣ ಗವಾಯಿ ಇಂದು ಭಾರತದ ೫೨ ನೇ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ರಾಷ್ಟ್ರಪತಿ ಭವನದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ನ್ಯಾಯಮೂರ್ತಿ ಗವಾಯಿ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಇವರ ಅಧಿಕಾರದ ಅವಧಿ ಇದೇ ವರ್ಷದ ನವೆಂಬರ್‌ನಲ್ಲಿ ಮುಕ್ತಾಯವಾಗಲಿದೆ. ನಿನ್ನೆ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದ ಸಂಜೀವ್ ಖನ್ನಾ ನಿವೃತ್ತರಾದರು. ಇಂದಿನ ಸಮಾರಂಭದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವ ಸಂಪುಟದ ಸದಸ್ಯರು, ನ್ಯಾಯಾಂಗ ವಲಯದ ಗಣ್ಯರು ಉಪಸ್ಥಿತರಿದ್ದರು.

*******

ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರಾಗಿ ಡಾ.ಅಜಯ್ ಕುಮಾರ್ ಅವರನ್ನು ನೇಮಿಸಲಾಗಿದೆ. ೧೯೮೫ ರ ಕೇರಳ ಕೇಡರ್‌ನ ನಿವೃತ್ತ ಐಎಎಸ್ ಅಧಿಕಾರಿಯಾದ ಅವರು ೨೦೧೯ ರಿಂದ ೨೦೨೨ರವರೆಗೆ ರಕ್ಷಣಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು.

*******

ಅರುಣಾಚಲ ಪ್ರದೇಶ ರಾಜ್ಯದ ವ್ಯಾಪ್ತಿಯಲ್ಲಿರುವ ಕೆಲವು ಪ್ರದೇಶಗಳಿಗೆ ಹೊಸ ಹೆಸರು ನೀಡುವ ಚೀನಾದ ನಿರಂತರ ಪ್ರಯತ್ನಗಳನ್ನು ಭಾರತ ಖಂಡಿಸಿದೆ. ವಿದೇಶಾಂಗ ವ್ಯವಹಾರಗಳ ವಕ್ತಾರ ರಣಧೀರ್ ಜೈಸ್ವಾಲ್, ಇಂತಹ ಕ್ರಮಗಳು ಸ್ವೀಕಾರಾರ್ಹವಲ್ಲ. ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ ಅಂಗ ಎಂದು ಹೇಳಿದರು.

*******

ಬಿಹಾರದಲ್ಲಿ ನಡೆಯುತ್ತಿರುವ ಖೇಲೋ ಇಂಡಿಯಾ ಯುವ ಕ್ರೀಡಾಕೂಟದಲ್ಲಿ ಮಹಾರಾಷ್ಟ್ರ ೧೨೦ ಪದಕಗಳೊಂದಿಗೆ ಅಗ್ರ ಸ್ಥಾನ ಪಡೆದುಕೊಂಡಿದೆ. ಈ ಪೈಕಿ ೪೬ ಚಿನ್ನ ಹಾಗೂ ೩೮ ಬೆಳ್ಳಿಪದಕಗಳು ಸೇರಿವೆ. ರಾಜಸ್ಥಾನ ೧೯ ಚಿನ್ನ, ೯ ಬೆಳ್ಳಿ ಪದಕಗಳೊಂದಿಗೆ ೨ ಸ್ಥಾನದಲ್ಲಿದ್ದರೆ, ಹರಿಯಾಣ ೧೭ ಚಿನ್ನ , ೧೩ ಬೆಳ್ಳಿ ಪದಕಗಳನ್ನು ಗಳಿಸಿ ಮೂರನೇ ಸ್ಥಾನದಲ್ಲಿದೆ. ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ನಾಳೆ ಖೇಲೋ ಇಂಡಿಯಾ ಕ್ರೀಡಾಕೂಟ ಮುಕ್ತಾಯವಾಗಲಿದೆ.

*******

ಬ್ಯಾಂಕಾಕ್‌ನಲ್ಲಿ ಇಂದಿನಿಂದ ಆರಂಭವಾಗಿರುವ ಥೈಲೆಂಡ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಶೆಟ್ಲರ್‌ಗಳು ಶುಭಾರಂಭ ಮಾಡಿದ್ದಾರೆ. ಆಕಾರ್ಶಿ ಕಶ್ಯಪ್ ಹಾಗೂ ಉನ್ನತಿಹೂಡ ಪ್ರೀಕ್ವಾರ್ಟರ್ ಫೈನಲ್ಸ್ ಪ್ರವೇಶಿಸಿದ್ದಾರೆ. ಜಪಾನ್‌ನ ಕೌರು ಸುಗ್ಗಿಯಾಮ ವಿರುದ್ಧ ಆಕರ್ಶಿ ಕಶ್ಯಪ್ ೨೧-೧೬, ೨೦-೨೨ ಹಾಗೂ ೨೨-೨೦ರ ಅಂತರದಲ್ಲಿ ಗೆಲುವು ಸಾಧಿಸಿದರು. ಥೈಲೆಂಡ್‌ನ ಥಮೋನ್‌ವಾನ್ ನಿತ್ತಿಟಿಕ್ರೈ ವಿರುದ್ಧ ಉನ್ನತಿಹೂಡ ೨೧-೧೪, ೧೮-೨೧, ೨೩-೨೧ ರ ಅಂತರದಲ್ಲಿ ಗೆಲುವು ಸಾಧಿಸಿದರು. ವಿಶ್ವದ ೧೮ನೇ ಶ್ರೇಯಾಂಕಿತ ಲಕ್ಷ್ಯ ಸೇನ್ ಪರಾಭವಗೊಂಡಿದ್ದಾರೆ.

*******

ಕೇನ್ಸ್ ಚಲನಚಿತ್ರೋತ್ಸವ ಉದ್ಘಾಟನಾ ಸಮಾರಂಭವು ಅಮೆಲಿ ಬೊನಿನ್ ಅವರ ಲೀವ್ ಒನ್ ಡೇ ಚಿತ್ರದ ಪ್ರಥಮ ಪ್ರದರ್ಶನದೊಂದಿಗೆ ಪ್ರಾರಂಭವಾಯಿತು, ಈ ಸಂದರ್ಭದಲ್ಲಿ ಫ್ರೆಂಚ್ ಪಾಪ್ ಐಕಾನ್ ಮೈಲೀನ್ ಫಾರ್ಮರ್ ಚಲನಚಿತ್ರ ನಿರ್ಮಾಪಕ ಡೇವಿಡ್ ಲಿಂಚ್‌ಗೆ ಸಂಗೀತ ಗೌರವ ಸಲ್ಲಿಸಲಾಯಿತು. ಹೆಚ್ಚು ಮೆಚ್ಚುಗೆ ಪಡೆದ ಹಿರಿಯ ಅಮೇರಿಕನ್ ನಟ, ನಿರ್ಮಾಪಕ ಮತ್ತು ನಿರ್ದೇಶಕ ರಾಬರ್ಟ್ ಡಿ ನಿರೋ ಅವರಿಗೆ ಗೌರವ ಪಾಮ್ ಡಿ'ಓರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕೇನ್ಸ್ ಚಲನಚಿತ್ರೋತ್ಸವದ ತೀರ್ಪುಗಾರರ ಜ್ಯೂರಿ ಅಧ್ಯಕ್ಷೆ ಜೂಲಿಯೆಟ್ ಬಿನೋಚೆ ಜಾಗತಿಕ ಸಮಸ್ಯೆಗಳು, ಯುದ್ಧ, ಹವಾಮಾನ ಬದಲಾವಣೆ ಮತ್ತು ಸ್ತ್ರೀದ್ವೇಷ ಕುರಿತು ಮಾತನಾಡಿದರು. ಈ ನಡುವೆ ಗಾಜಾದಲ್ಲಿ ಹತರಾದ ಪ್ಯಾಲೇಸ್ಟಿನಿಯನ್ ಫೋಟೋ ಜರ್ನಲಿಸ್ಟ್ ಫಾತಿಮಾ ಹಸೌನಾ ಅವರಿಗೆ ಗೌರವ ಸಲ್ಲಿಸಲಾಯಿತು. ಈ ವರ್ಷದ ಕ್ಯಾನೆಸ್ ಚಲನಚಿತ್ರೋತ್ಸವದಲ್ಲಿ ಬಲವಾದ ಛಾಪು ಮೂಡಿಸಲು ಭಾರತವು ಮತ್ತೊಮ್ಮೆ ಜಾಗತಿಕ ಸಿನಿಮೀಯ ವೇದಿಕೆಯಲ್ಲಿ ಪ್ರಜ್ವಲಿಸಲು ಸಜ್ಜಾಗಿದೆ. ಜ್ಯೂರಿ ಸದಸ್ಯೆ ಮತ್ತು ಆಲ್ ವೀ ಇಮ್ಯಾಜಿನ್ ಆಸ್ ಲೈಟ್‌ನ ಭಾರತೀಯ ಚಲನಚಿತ್ರ ನಿರ್ಮಾಪಕಿ ಪಾಯಲ್ ಕಪಾಡಿಯಾ ಅವರು ಭಾರತವನ್ನು ಪ್ರತಿನಿಧಿಸಿದ್ದಾರೆ.

*******

ಸೌಮಿತ್ರ ಚಟರ್ಜಿ ಮತ್ತು ಶರ್ಮಿಳಾ ಟ್ಯಾಗೋರ್ ನಟಿಸಿದ ಸತ್ಯಜಿತ್ ರೇ ಅವರ ೧೯೭೦ ರ ಕ್ಲಾಸಿಕ್ 'ಅರಣ್ಯರ್ ದಿನ್ ರಾತ್ರಿ' ಚಿತ್ರವು ಕ್ಲಾಸಿಕ್ಸ್ ವಿಭಾಗದಲ್ಲಿ ಪ್ರದರ್ಶಿಸಲಾಗುವುದು. ನಿರ್ದೇಶಕ ನೀರಜ್ ಘಯ್ವಾನ್ ಅವರ ಎರಡನೇ ಚಲನಚಿತ್ರ 'ಹೋಮ್‌ಬೌಂಡ್', ೨೦೨೫ ರಲ್ಲಿ ಅನ್‌ಸರ್ಟೈನ್ ರಿಗಾರ್ಡ್ ವಿಭಾಗಕ್ಕೆ ಆಯ್ಕೆಯಾಗಿದೆ. ಬಾಲಿವುಡ್ ನಟ ಅನುಪಮ್ ಖೇರ್ 'ತನ್ವಿ: ದಿ ಗ್ರೇಟ್' ಮೂಲಕ ನಿರ್ದೇಶನ ಮಾಡಿರುವ ಚಿತ್ರವು ಮಾರ್ಚೆ ಡು ಫಿಲ್ಮ್‌ನಲ್ಲಿ ಪ್ರಥಮ ಪ್ರದರ್ಶನಗೊಳ್ಳಲಿದೆ. ಸತ್ಯಜಿತ್ ರೇ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ ನಿರ್ಮಾಣದ 'ಎ ಡಾಲ್ ಮೇಡ್ ಅಪ್ ಆಫ್ ಕ್ಲೇ' ಚಿತ್ರ ಪ್ರದರ್ಶಿಸಲಾಗುವುದು.

***END****